# NO ENTRY FOR POOR AND COMMON PEOPLE TO CUBBON PARK AND LALBAGH

**(ENTRY RESTRICTED TO ID CARD HOLDING ELITES ONLY)**



The Government of Karnataka plans to make ID cards mandatory to enter Cubbon Park and Lalbagh, and that at a cost of Rs 200/person. This is the beginning of the state's encroachment of people's right to freely access public spaces and a stage is being set to privatise public commons. All sorts of devious reasons are being flung at the public, including security concerns, morality and misuse of parks by "unnecessary elements".

The manner in which the policy is formulated encourages the particular exclusion of access rights of the urban poor (especially from minorities), street and working children, elderly people, transgenders , migrant workers, labourers, street vendors, drivers of autorickshaws and taxis, differently abled, families with children, etc. The idea of having to carry an ID merely to access these two parks, fundamentally distances them from their unfettered and constitutionally protected Right to Use Public Spaces. This policy also promotes discriminatory access to public spaces as it privileges 'regular walkers' and thus negates the very concept of parks as public commons. Simply stated this draconian policy encroaches our very fundamental Right to Live a Healthy Life based on dignified and unfettered access to public spaces.

## Join the Protest against this fundamental encroachment of Our Right to Access all Public Commons

***COME JOIN THIS JUST PROTEST WITH FAMILIES, COLLEAGUES, FRIENDS, NEIGHBOURS***

**Queen's Statue, Cubbon park, Monday, 30th November, 4.00 pm – 6.00 pm**

***Protest initiated by Environment Support Group, Slum Jagatthu, CIEDS, Vimochana, Dalit Sangharsh Samiti-Samyojaka (Bangalore Dist.), Sanmathi, Alternative Law Forum, Sangama, Stree Jagruthi Samithi, CIVIC Bangalore, Hasiru Usiru and Open Space.***

**For more details contact:** Environment Support Group,1572, Outer Ring Road, Banshankari 2nd stage, Bangalore-560070 Tel:-91-80-26713559-60 Email:esg@esgindia.org, bhargavi@esgindia.org Website: www.esgindia.org

# ಕಬ್ಬನ್ ಪಾರ್ಕ್ ಹಾಗೂ ಲಾಲ್‌ಬಾಗ್‌ಗಳಲ್ಲಿ ಬಡವರಿಗೆ ಹಾಗೂ ಸಾಮಾನ್ಯ ಜನರಿಗೆ ಪ್ರವೇಶವಿಲ್ಲ

## (ಗುರುತಿನ ಚೀಟಿಯನ್ನು ಹೊಂದಿದ ಗಣ್ಯರಿಗೆ ಮಾತ್ರ ಪ್ರವೇಶವನ್ನು ಸೀಮಿತಿಗೊಳಿಸಲಾಗಿದೆ)



ಪ್ರತಿ ವ್ಯಕ್ತಿಗೆ ರೂ.200/–ರಂತೆ, ಕಬ್ಬನ್ ಪಾರ್ಕ್ ಹಾಗೂ ಲಾಲ್‌ಬಾಗ್‌ಗಳನ್ನು ಪ್ರವೇಶಿಸಲು ಗುರುತಿನ ಚೀಟಿಗಳನ್ನು ಕಡ್ಡಾಯವಾಗಿಸಲು ಕರ್ನಾಟಕ ಸರ್ಕಾರ ಯೋಜಿಸಿದೆ. ಸಾರ್ವಜನಿಕ ಸ್ಥಳಗಳ ಉಚಿತ ಪ್ರವೇಶದ ಜನರ ಹಕ್ಕನ್ನು ಸರ್ಕಾರವು ಅತಿಕ್ರಮಿಸುವುದರ ಪ್ರಾರಂಭ ಇದು. ಸುರಕ್ಷತೆಯ ಕಳಕಳಿ, ನೈತಿಕತೆ ಹಾಗೂ "ಬೇಡದ ವ್ಯಕ್ತಿ"ಗಳಿಂದ ಪಾರ್ಕ್‌ಗಳ ದುರ್ಬಳಕೆಯಂತಹ ಹಲವಾರು ಕಾರಣಗಳನ್ನು ಸಾರ್ವಜನಿಕರಿಗೆ ನೀಡಲಾಗುತ್ತಿದೆ.

ನಗರದ ಬಡಜನರು (ವಿಶೇಷವಾಗಿ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವರು), ಬೀದಿ ಹಾಗೂ ಕಾರ್ಮಿಕ ಮಕ್ಕಳು, ವಯಸ್ಸಾದವರು, ಹಿಜ್ಡಾಗಳು ಹಾಗೂ ಲಿಂಗ ಬದಲಾವಣೆ ಮಾಡಿಕೊಂಡವರು, ವಲಸೆ ಬಂದ ಕಾರ್ಮಿಕರು, ಕೂಲಿಯಾಳುಗಳು, ಬೀದಿ ವ್ಯಾಪಾರಿಗಳು, ಆಟೋರಿಕ್ಷಾ ಹಾಗೂ ಟ್ಯಾಕ್ಸಿ ಚಾಲಕರು, ವಿಕಲಚೇತನರು, ಮಕ್ಕಳಿರುವ ಕುಟುಂಬಗಳು, ಇತ್ಯಾದಿಗಳ ಲಭ್ಯತೆಯ ಹಕ್ಕಿನಿಂದ ವಂಚಿತಗೊಳ್ಳುವುದನ್ನು ಈ ಕಾರ್ಯನೀತಿಯ ನಿರೂಪಣೆಯನ್ನು ಮಾಡುವ ವಿಧಾನವು ಉತ್ತೇಜಿಸುತ್ತದೆ. ಕೇವಲ ಈ ಪಾರ್ಕ್‌ಗಳ ಪ್ರವೇಶಕ್ಕಾಗಿ ಗುರುತು ಚೀಟಿಯನ್ನು ಒಯ್ಯಬೇಕಾದ ವ್ಯವಸ್ಥೆಯು, ಅವರ ಅನಿರ್ಬಂಧಿತ ಹಾಗೂ ಸಮ್ವಿದಾನಿಕವಾಗಿ ರಕ್ಷಿತವಾದ ***ಸಾರ್ವಜನಿಕ ಸ್ಥಳಗಳ ಬಳಕೆಯ ಹಕ್ಕಿ***ನಿಂದ ಮೂಲಭೂತವಾಗಿ ಬೇರ್ಪಡಿಸುತ್ತದೆ. ಈ ಕಾರ್ಯನೀತಿಯು ಸಾರ್ವಜನಿಕ ಸ್ಥಳಗಳ ಪಕ್ಷಪಾತಯುಕ್ತ ಲಭ್ಯತೆಯನ್ನು ಉತ್ತೇಜಿಸಿ, "ನಿಯಮಿತ ನಡಿಗೆದಾರ"ರಿಗೆ ಮಾತ್ರ ಈ ಅನುಕೂಲವನ್ನು ಒದಗಿಸಿ, ಪಾರ್ಕ್‌ಗಳು ಸಾರ್ವಜನಿಕ ಭೂಮಾಳಗಳೆಂಬ ಚಿಂತನೆಯನ್ನೇ ನಗಣ್ಯ ಮಾಡುತ್ತದೆ. ಸರಳವಾಗಿ ಹೇಳುವುದಾದರೆ, ಸಾರ್ವಜನಿಕ ಸ್ಥಳಗಳ ಗಂಭೀರ ಹಾಗೂ ಅನಿರ್ಬಂಧಿತ ಲಭ್ಯತೆಯ, ಆರೋಗ್ಯ ಜೀವನವನ್ನು ನಡೆಸುವ ನಮ್ಮ ಮೂಲಭೂತ ಹಕ್ಕನ್ನು ಈ ಕಠಿಣವಾದ ಕಾರ್ಯನೀತಿಯು ಅತಿಕ್ರಮಿಸುತ್ತದೆ.

**ಸಾರ್ವಜನಿಕ ಸ್ಥಳಗಳೆಲ್ಲದರ ಲಭ್ಯತೆಯ ನಮ್ಮ ಹಕ್ಕಿನ ಮೇಲೆ ನಡೆಯುತ್ತಿರುವ ಈ ಮೂಲಭೂತ ಅತಿಕ್ರಮಣದ ವಿರುದ್ಧ ನಡೆಸುವ ಪ್ರತಿಭಟನೆಯ ಭಾಗವಾಗಿ**

***ಕುಟುಂಬಗಳು, ಸಹೋದ್ಯೋಗಿಗಳು, ಸ್ನೇಹಿತರು ಹಾಗೂ ನೆರೆಹೊರೆಯವರೊಡನೆ, ಈ ನ್ಯಾಯಯುತ ಪ್ರತಿಭಟನೆಗಾಗಿ ನಮ್ಮೊಡನೆ ಸೇರಿ***

**ರಾಣಿಯ ಪ್ರತಿಮೆ, ಕಬ್ಬನ್ ಪಾರ್ಕ್, ಸೋಮುವಾರ, 30ನೆಯ ನವೆಂಬರ್, ಸಂಜೆ 4.00 ಘಂಟೆ**

**ಪ್ರತಿಭಟನೆಯ ರೂವಾರಿಗಳು: ಎನ್‌ವೈರನ್‌ಮೆಂಟ್ ಸಪೋರ್ಟ್ ಗ್ರೂಪ್, ಸ್ಲಂ ಜಗತ್ತು, ಸಿಯೆಡ್ಸ್, ವಿಮೋಚನ, ದಲಿತ ಸಂಘರ್ಷ ಸಮಿತಿ – ಸಂಯೋಜಕ (ಬೆಂಗಳೂರು ಜಿಲ್ಲೆ), ಸನ್ಮತಿ, ಆಲ್ಟರ್‌ನೇಟಿವ್ ಲಾ ಫೋರಂ, ಸಂಗಮ, ಸ್ತ್ರೀ ಜಾಗೃತಿ ಸಮಿತಿ, ಸಿವಿಕ್ ಬೆಂಗಳೂರು ಹಸಿರು ಉಸಿರು, ಹಾಗೂ ಓಪನ್ ಸ್ಪೇಸ್.**

**ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:** ಎನ್‌ವೈರನ್‌ಮೆಂಟ್ ಸಪೋರ್ಟ್ ಗ್ರೂಪ್, 1572, ಔಟರ್ ರಿಂಗ್ ರೋಡ್, ಬನಶಂಕರಿ 2ನೆಯ ಹಂತ, ಬೆಂಗಳೂರು – 560070 ದೂ: 91–80–26713559–60 ಈ–ಮೇಲ್: :esg@esgindia.org, bhargavi@esgindia.org ವೆಬ್ ತಾಣ: www.esgindia.org

**Stop Elitist Management of Public Spaces**

Appeal to Shri Umesh Katti

Karnataka Minister of Horticulture

Dear Shri Katti,

Access to Public Spaces in a city is a fundamental right of all people. Parks as public spaces serve many purposes for people in their daily lives. They provide a public place for people to walk, rest, have a picnic, let their children play, and enjoy a few moments of peace away from the grinding stress of city life. They help foster good health, social gathering and quietude. Without parks, the city becomes a soulless concrete jungle from which there is no escape. What was once known as the "Garden City of India," Bangalore has seen rapid destruction of its parks and public spaces in recent years. Lakshman Rao Park, Chikka Lalbagh, and KR Road Park are just some of the green spaces that have been stolen from people. With the dwindling status of parks, it is vital that we protect the few remaining sanctuaries we have left in the chaos of the city.

Next on the chopping block are two icons in Bangalore's history: Lalbagh and Cubbon Park. These parks, however, will not be destroyed by axes and earthmovers. These will be destroyed in a much more subtle way: by the intentional exclusion of the most disadvantaged sections of the population. Already Lalbagh has imposed a Rs. 10/- entry fee – an exclusionary tactic and outright violation of the Right to Use of Public Spaces. A family of five cannot afford to take their children to play in the park at a cost of Rs. 50/- to enter. Under the guise of protecting the parks from those who would damage them, the Horticulture Department has now decided to implement a system of elitist exclusion and surveillance by requiring all walkers at certain hours to carry electronic identification cards. This act is unprecedented anywhere in the world, and violates a person's inalienable Right to Access their Parks.

The very principle of restricting access to spaces which should be open to all is appalling, but the actual ramifications are equally frightening. Walking clubs have already rejected a Rs. 200/- annual fee to access the Lalbagh, but middle-class walkers will be the least affected by this proposal. What happens to those who cannot afford the Rs. 50/- ID card (plus the cost of a photograph) or who do not have proof of address? The proposal of a Rs. 200/- yearly fee for walkers has been rejected for now, but there is no guarantee that this won't come up again. Moreover, who will decide which applications will be accepted into the select club of morning walkers? People who do not fit the class based application criteria will be subsequently barred from entry. The manner in which the policy is formulated encourages the particular exclusion of access rights of the urban poor (particularly minorities), street and working children, elderly people, people of third gender, migrant workers, labourers, street vendors, drivers of autorickshaws and taxis, differently abled, families with children, etc.

The use of a scannable ID card to gain entry to the dwindling green spaces in the city has the ominous aura of some authoritarian society from a fantasy novel. What is the real reason for implementing this ID card? There is nothing inherent in the card which protects the park. It is entirely possible and likely that

people would buy the card, and would continue to misuse the park anyway. At the heart of this plan is the simultaneous surveillance of the citizen, and the exclusion of "undesirable elements" from a public space. Destruction of the parks will continue regardless of an ID card, and their protection can continue without it.

The perception of the city is being changed fundamentally before our eyes. As PM Manmohan Singh travels to the US to help encourage more investment in India, cities are being reworked to be more appealing to foreign capital. In the frantic attempt to foster an image of Bangalore as a IT city, peoples' rights in the city are being eroded by culturally sterile elitist proposals of restricting access to the commons. In this imagination, the city is organized around the private individual, who travels by private car to their IT job in Whitefield or Electronics City, returns home to a private gated community, and walks around the track of the newly private park during proper "business hours" - all the time with an electronic ID badge swinging around their neck. Such a vision of "development" creates private bubbles around citizens, protected against the perceived filth and disorganization of the city. This can only be done through the exclusion of all marginalized communities who threaten the privileged comfort of the middle class.

Public goods should be just that: public. If the private world is based on the principle of exclusion, then by definition the public sphere should be inclusive. ID cards create a system of private parks, based on the exclusion of those who cannot afford the fees. What one is really doing by paying Rs. 50/- for an ID card is buying a membership to a private club. This does not mean that parks shouldn't be protected against misuse and destruction. However, such exclusion of access reinforces class divisions, which simultaneously overlaps with other societal divisions based on caste, employment, appearance, religion, etc. The principle of restricting entrance to public spaces based on a few people's perceived misuse holds disturbing ramifications for access to many public goods. Beaches, roads, sidewalks, lakes, and the future of public commons are all threatened by this logic.

We the undersigned demand that you revoke this elitist and illegal policy as it violates people's fundamental Right to Use Public Spaces as a fundamental component of their Right to Live. Parks should be open to anyone who wishes to enjoy the green havens in the city, free of charge, and not just those who can afford to buy a membership.

***Protest initiated by Environment Support Group, Slum Jagatthu, CIEDS, Vimochana, Dalit Sangharsh Samiti-Samyojaka (Bangalore Dist.), Sanmathi, Alternative Law Forum, Sangama, Stree Jagruthi Samithi, CIVIC Bangalore, Hasiru Usiru and Open Space.***

ಸಾರ್ವಜನಿಕ ಸ್ಥಳಗಳ ಬುದ್ಧಿಗರ್ವಿ ನಿರ್ವಹಣೆಯನ್ನು ನಿಲ್ಲಿಸಿ

ಶ್ರೀ ಉಮೇಶ್ ಕಟ್ಟಿಯವರಿಗೆ ಮನವಿ

ಕರ್ನಾಟಕದ ತೋಟಗಾರಿಕೆ ಇಲಾಖೆಯ ಮಂತ್ರಿಗಳು

ಸನ್ಮಾನ್ಯ ಶ್ರೀ ಕಟ್ಟಿಯವರೇ,

ಯಾವುದೇ ನಗರದಲ್ಲದರೂ, ಸಾರ್ವಜನಿಕ ಸ್ಥಳಗಳ ಲಭ್ಯತೆಯು ಎಲ್ಲ ಜನರ ಮೂಲಭೂತ ಹಕ್ಕು. ನಮ್ಮ ದೈನಂದಿನ ಜೀವನದಲ್ಲಿ ಸಾರ್ವಜನಿಕ ಸ್ಥಳಗಳಾದ ಉದ್ಯಾನಗಳು ಜನರ ಹಲವಾರು ಉದ್ದೇಶಗಳನ್ನು ಈಡೇರಿಸುತ್ತವೆ. ಜನರು ನಡೆಯಲು, ವಿಶ್ರಮಿಸಲು, ಪಿಕ್‌ನಿಕ್ ಆಚರಿಸಲು, ತಮ್ಮ ಮಕ್ಕಳಿಗೆ ಆಡಲು ಅವಕಾಶ ಕಲ್ಪಿಸಲು ಹಾಗೂ ನಗರದ ಒತ್ತಡ ತುಂಬಿದ ಜೀವನದಿಂದ ಕೆಲ ಕಾಲ ವಿಶ್ರಾಮದ, ನೆಮ್ಮದಿಯ ಕ್ಷಣಗಳನ್ನು ಕಳೆಯಲು ಇವು ಅವಕಾಶವನ್ನು ಒದಗಿಸುತ್ತದೆ. ಒಳ್ಳೆಯ ಆರೋಗ್ಯ, ಸಾಮಾಜಿಕ ಒಟ್ಟುಗೂಡಿಕೆ ಹಾಗೂ ಪ್ರಶಾಂತತೆಯನ್ನು ಉತ್ತೇಜಿಸುತ್ತವೆ. ಉದ್ಯಾನಗಳಿಲ್ಲದೆ, ನಗರವು ತಪ್ಪಿಸಿಕೊಳ್ಳಲಾಗದ, ಆತ್ಮವಿಲ್ಲದ ಕಾಂಕ್ರೀಟ್ ಕಾಡಾಗುತ್ತದೆ. ಇತ್ತೀಚಿನವರೆಗೆ "ಉದ್ಯಾನ ನಗರಿ" ಎಂದು ಖ್ಯಾತಿ ಪಡೆದ ಬೆಂಗಳೂರಿನಲ್ಲಿ, ಈ ಕೆಲವು ವರ್ಷಗಳಲ್ಲಿ ಅದರ ಉದ್ಯಾನಗಳು ಹಾಗೂ ತೆರೆದ ಸ್ಥಳಗಳ ವೇಗದ ಅವನತಿಯನ್ನು ಕಂಡಿದೆ. ಜನರಿಂದ ಕಸಿದುಕೊಂಡಿರುವ ಕೆಲವು ಹಸಿರು ಸ್ಥಳಗಳ ಪೈಕಿ ಲಕ್ಷ್ಮಣರಾವ್ ಉದ್ಯಾನವನ, ಚಿಕ್ಕ ಲಾಲ್‌ಬಾಗ್ ಹಾಗೂ ಕೆ.ಆರ್.ರಸ್ತೆ ಉದ್ಯಾನಗಳು ಸೇರಿವೆ. ಉದ್ಯಾನಗಳ ಕುಂದುತ್ತಿರುವ ಸ್ಥಿತಿಗತಿಗಳ ನಡುವೆ, ನಗರದ ಅಸ್ಥವ್ಯಸ್ಥತೆಯ ನಡುವೆ ಉಳಿದ ಕೆಲವೇ ಕೆಲವು ಪವಿತ್ರ ಆಶ್ರಯ ತಾಣಗಳನ್ನು ರಕ್ಷಿಸುವುದು ಅತ್ಯಗತ್ಯ.

ಬೆಂಗಳೂರಿನ ಇತಿಹಾಸದ ದ್ಯೋತಕಗಳಾದ ಲಾಲ್‌ಬಾಗ್ ಹಾಗೂ ಕಬ್ಬನ್ ಪಾರ್ಕ್‌ಗಳು ಬಲಿಗೆ ಸಿದ್ಧವಾದ ಎರಡು ಪವಿತ್ರ ಸ್ಥಳಗಳು. ಆದರೆ, ಈ ಉದ್ಯಾನಗಳನ್ನು ಯಾವುದೇ ಕೊಡಲಿಯಾಗಲಿ ಅಥವಾ ಮಣ್ಣು ಅಗಿಯುವ ಯಂತ್ರಗಳಾಗಲಿ, ನಾಶ ಮಾಡುವುದಿಲ್ಲ. ಅವುಗಳನ್ನು ಇನ್ನೂ ನವಿರಾದ ರೀತಿಗಳಲ್ಲಿ, ಅಂದರೆ ಜನಸಂಖ್ಯೆಯ ಅತ್ಯಂತ ಕಡೆಗಣಿಸಲ್ಪಟ್ಟ ಗುಂಪುಗಳನ್ನು ಉದ್ದೇಶಪೂರ್ವಕವಾಗಿ ಹೊರಗಿಡುವ ಮೂಲಕ, ಇದನ್ನು ಸಾಧಿಸಲು ಹೊರಟಿದ್ದಾರೆ. ಈಗಾಗಲೇ ಲಾಲ್‌ಬಾಗ್‌ನಲ್ಲಿ ರೂ.10/–ರ ಪ್ರವೇಶ ದರವನ್ನು ವಿದಿಸಲಾಗುತ್ತಿದೆ – ಇದು ಪ್ರತ್ಯೇಕತಾವದದ ಉಪಾಯ ಹಾಗೂ ಸಾರ್ವಜನಿಕ ಸ್ಥಳಗಳ ಬಳಕೆಯ ಹಕ್ಕಿನ ಮುಚ್ಚುಮರೆ ಇಲ್ಲದ ಉಲ್ಲಂಘನೆ. ಐದು ಜನರ ಕುಟುಂಬವೊಂದು ಉದ್ಯಾನವನ್ನು ಪ್ರವೇಶಿಸಲು ರೂ.50/– ತೆತ್ತುವ ಸಾಮರ್ಥ್ಯ ಇರುವುದಿಲ್ಲ. ಉದ್ಯಾನವನ್ನು ಹಾಳು ಮಾಡುವವರಿಂದ ರಕ್ಷಿಸುವ ನೆಪದಲ್ಲಿ, ತೋಟಗಾರಿಕೆ ಇಲಾಖೆಯು ಬುದ್ಧಿಗರ್ವಿ ಪ್ರತ್ಯೇಕತಾವದವನ್ನು ಉತ್ತೇಜಿಸುವ, ಎಲ್ಲ ನಡಿಗೆದಾರರೂ ದಿನದ ಕೆಲವು ಸಮಯದಲ್ಲಿ ಎಲೆಕ್ಟ್ರಾನಿಕ್ ಗುರುತಿನ ಚೀಟಿಗಳನ್ನು ಒಯ್ಯಬೇಕಾದ ಅಗತ್ಯವಿರುವ ಕಣ್ಗಾವಲಿನ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲು ನಿರ್ಧರಿಸಿದೆ. ಈ ರೀತಿಯ ನಿರ್ದರ್ಶನವು ವಿಶ್ವದ ಯಾವುದೇ ಭಾಗದಲ್ಲೂ ಕಂಡಿಲ್ಲ, ಹಾಗೂ ಇದು ತಮ್ಮ ಉದ್ಯಾನಗಳನ್ನು ಪ್ರವೇಶಿಸುವ ಜನರ ನಿರ್ವಿವಾದಿತ ಹಕ್ಕಿನ ಉಲ್ಲಂಘನೆಯಾಗಿದೆ.

ಎಲ್ಲರಿಗೂ ತೆರವಾಗಬೇಕಾದ ಸ್ಥಳಗಳನ್ನು ನಿಷಿದ್ಧ ಲಭ್ಯತೆಯ ಸ್ಥಳಗಳನ್ನಾಗಿ ಮಾಡುವ ತತ್ವವೇ ಅಸಹ್ಯ ಹುಟ್ಟಿಸುವಂತಹುದು, ಆದರೆ, ಅದರ ವಾಸ್ತವ ಪರಿಣಾಮಗಳು ದಿಗಿಲು ಮೂಡಿಸುತ್ತವೆ. ನಡಿಗೆಯ ಕ್ಲಬ್‌ಗಳು ಈಗಾಗಲೇ ಲಾಲ್‌ಬಾಗ್ ಪ್ರವೇಶಕ್ಕೆ ವಿಧಿಸಿದ ರೂ.200/– ವಾರ್ಷಿಕ ಶುಲ್ಕವನ್ನು ತಿರಸ್ಕರಿಸಿವೆ, ಆದರೆ ಮಧ್ಯಮ ವರ್ಗಕ್ಕೆ ಸೇರಿದ ನಡಿಗೆದಾರರು ಈ ಪ್ರಸ್ತಾಪದಿಂದ ಅಷ್ಟಾಗಿ ಪ್ರಭಾವಿತರಾಗುವುದಿಲ್ಲ. ಗುರುತಿನ ಚೀಟಿಗೆ ತಗಲುವ ರೂ.50/–ರ ವೆಚ್ಚವನ್ನು (ಭಾವಚಿತ್ರದೊಂದಿಗೆ) ಪೂರೈಸಲಾಗದವರು, ಅಥವಾ ವಿಳಾಸದ ಪ್ರಮಾಣ ಇಲ್ಲದವರು ಏನು ಮಾಡಬೇಕು? ಸಧ್ಯಕ್ಕೆ ನಡಿಗೆದಾರರಿಗೆ ವಿಧಿಸುವ ರೂ.200/–ರ ಶುಲ್ಕದ ಪ್ರಸ್ತಾಪವನ್ನು ತಿರಸ್ಕರಿಸಲಾಗಿದೆ, ಆದರೆ ಈ ವಿಷಯ ಮತ್ತೆ ಪ್ರಸ್ತಾಪ ಮಾಡಲಾಗುವುದಿಲ್ಲವೆಂಬುದಕ್ಕೆ ಯಾವುದೇ ಖಾತರಿ ಇಲ್ಲ. ಅಲ್ಲದೆ, ಮುಂಜಾನೆ ನಡಿಗೆದಾರರ ಆಯ್ದ ಸಂಘಕ್ಕೆ ಯಾವ ಅರ್ಜಿಗಳು ಪ್ರವೇಶ ನಿಷಿದ್ಧವಾಗುವುದೆಂದು ಹೇಳುವವರು ಯಾರು? ವರ್ಗಾಧಾರಿತ ಅರ್ಜಿಯ ಆದ್ಯತೆಗಳನ್ನು ಪೂರೈಸದ ಜನರಿಗೆ, ಪ್ರವೇಶದ ಅನುಮತಿಯನ್ನು ನೀಡದೆ ಇರಬಹುದು. ನಗರದ ಬಡಜನರು (ವಿಶೇಷವಾಗಿ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವರು), ಬೀದಿ ಹಾಗೂ ಕಾರ್ಮಿಕ ಮಕ್ಕಳು, ವಯಸ್ಸಾದವರು, ಹಿಜ್ಡಾಗಳು ಹಾಗೂ ಲಿಂಗ ಬದಲಾವಣೆ ಮಾಡಿಕೊಂಡವರು, ವಲಸೆ ಬಂದ ಕಾರ್ಮಿಕರು, ಕೂಲಿಯಾಳುಗಳು, ಬೀದಿ ವ್ಯಾಪಾರಿಗಳು, ಆಟೋರಿಕ್ಷಾ ಹಾಗೂ ಟ್ಯಾಕ್ಸಿ ಚಾಲಕರು, ವಿಕಲಚೇತನರು, ಮಕ್ಕಳಿರುವ ಕುಟುಂಬಗಳು, ಇತ್ಯಾದಿಗಳ ಲಭ್ಯತೆಯ ಹಕ್ಕಿನಿಂದ ವಂಚಿತಗೊಳ್ಳುವುದನ್ನು ಈ ಕಾರ್ಯನೀತಿಯ ನಿರೂಪಣೆಯನ್ನು ಮಾಡುವ ವಿಧಾನವು ಉತ್ತೇಜಿಸುತ್ತದೆ.

**ಸ್ಕ್ಯಾನ್ ಮಾಡಬಹುದಾದ ಗುರುತಿನ ಚೀಟಿಗಳ ಬಳಕೆಯನ್ನು ಮಾಡಿ, ಕಡಿಮೆ ಆಗುತ್ತಿರುವ ನಗರದ ಹಸಿರು ಪ್ರದೇಶಗಳಿಗೆ ಪ್ರವೇಶ ಪಡೆಯುವ ಪರಿಕಲ್ಪನೆಯು, ಯಾವುದೋ ಕಾಲ್ಪನಿಕ ಕಥೆಯ ಅಧಿಕಾರಶಾಹಿ ಸಮಾಜದ ಭೀತಿ ತುಂಬಿದ ವಾತಾವರಣವನ್ನು ನೆನಪಿಸುತ್ತದೆ. ಈ ಗುರುತಿನ ಚೀಟಿಯ ಅನುಷ್ಠಾನದ ಹಿಂದೆ ಇರುವ ನಿಜವಾದ ಕಾರಣವೇನು? ಉದ್ಯಾನವನ್ನು ರಕ್ಷಿಸುವ ಯಾವುದೇ ಅಂಶವು ಈ ಗುರುತಿನ ಚೀಟಿಯಲ್ಲಿ ಅಡಕವಾಗಿಲ್ಲ. ಜನರು ಚೀಟಿಯನ್ನು ಕೊಂಡುಕೊಂಡು, ನಂತರ ಉದ್ಯಾನವನ್ನು ದುರುಪಯೋಗ ಪಡಿಸಿಕೊಳ್ಳುವುದನ್ನು ಮುಂದುವರೆಸುವ ಎಲ್ಲ ಸಾಧ್ಯತೆಯೂ ಇದೆ. ಈ ಯೋಜನೆಯ ಜೀವಾಳದಲ್ಲಿ, ನಾಗರಿಕರ ಮೇಲೆ ಕಣ್ಗಾವಲು ಇರಿಸುವುದರ ಜೊತೆಗೆ, ಸಾರ್ವಜನಿಕ ಸ್ಥಳದಿಂದ "ಅನಪೇಕ್ಷಿತ ಮಂದಿ"ಯನ್ನು ಹೊರಗಿಡುವ ಉದ್ದೇಶವೂ ಇದೆ. ಗುರುತಿನ ಚೀಟಿ ಇದ್ದರೂ ಪಾರ್ಕ್/ಉದ್ಯಾನಗಳ ನಾಶ ಮುಂದುವರಿಯವುದು ಆಗುತ್ತಲೇ ಇರುತ್ತದೆ, ಹಾಗೂ ಅವುಗಳ ರಕ್ಷಣೆಯನ್ನು ಗುರುತಿನ ಚೀಟಿ ಇಲ್ಲದೆಯೂ ಮಾಡಬಹುದು.**

ನಗರದ ಬಗೆಗಿನ ಪರಿಕಲ್ಪನೆ ನಮ್ಮ ಕಣ್ಣ ಮುಂದೆಯೇ ಮೂಲಭೂತವಾಗಿ ಬದಲಾವಣೆ ಆಗುತ್ತಿದೆ. ಪ್ರಧಾನ ಮಂತ್ರಿ ಶ್ರೀ ಮನಮೋಹನ್ ಸಿಂಗ್‌ರವರು ಭಾರತದಲ್ಲಿ ಹೆಚ್ಚು ಹೂಡಿಕೆಯನ್ನು ಉತ್ತೇಜಿಸಲು ಅಮೇರಿಕಾ ಪ್ರವಾಸಕ್ಕೆ ಹೊರಟಿದ್ದಾರೆ ಹಾಗೂ ವಿದೇಶೀ ಬಂಡವಾಳವನ್ನು ಆಕರ್ಷಿಸುವ ಸಲುವಾಗಿ, ನಗರಗಳ ಮರುವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಬೆಂಗಳೂರನ್ನು ಐಟಿ ನಗರವೆಂದು ಚಿತ್ರಿಸುವ ತರಾತುರಿಯಲ್ಲಿ, ಭೂಮಾಳಗಳನ್ನು ನಿಷೇಧಿತ ಪ್ರವೇಶಗಳನ್ನಾಗಿ ಮಾಡುವ ಬುದ್ಧಿಗರ್ವಿ ಹಾಗೂ ಸಾಂಸ್ಕೃತಿಕವಾಗಿ ಬರಡಾದ ಪ್ರಸ್ತಾಪಗಳ ಮೂಲಕ, ನಗರದ ಜನರ ಹಕ್ಕುಗಳನ್ನು ಹೆಕ್ಕಿ ಹಾಕಲಾಗುತ್ತಿದೆ. ಈ ಪರಿಕಲ್ಪನೆಯಲ್ಲಿ, ವೈಟ್‌ಫೀಲ್ಡ್ ಅಥವಾ ಎಲೆಕ್ಟ್ರಾನಿಕ್ಸ್ ಸಿಟಿಗೆ ತಮ್ಮ ಖಾಸಗಿ ಕಾರಿನಲ್ಲಿ ಐಟಿ ಉದ್ಯೋಗದ ಸಲುವಾಗಿ ಪಯಣಿಸುವ , ಖಾಸಗಿ ಹಾಗೂ ಬಿಗಿ ರಕ್ಷಣಾ ವ್ಯವಸ್ಥೆಯಿರುವ ಬಡಾವಣೆಗಳ ಸಮುದಾಯಗಳಲ್ಲಿ ವಾಸ ಮಾಡುವ ಹಾಗೂ ನಿಯಮಿತ "ವ್ಯಾಪಾರದ ವೇಳೆ"ಯಲ್ಲಿ ಖಾಸಗಿ ಪಾರ್ಕಿನಲ್ಲಿ ಹೊಸದಾಗಿ ನಿರ್ಮಿತವಾದ ಟ್ರ್ಯಾಕ್‌ನ ಮೇಲೆ ನಡೆದಾಡುವ, ಖಾಸಗಿ ವ್ಯಕ್ತಿಯುತ್ತ ನಗರವನ್ನು ರೂಪಿಸಲಾಗುತ್ತಿದೆ – ಈ ವ್ಯಕ್ತಿಯು ಸದಾಕಾಲ ತನ್ನ ಕತ್ತಿನ ಸುತ್ತ ಗುರುತಿನ ಚೀಟಿಯ ಬ್ಯಾಡ್ಜನ್ನು ನೇತಾಡಿಸಿಕೊಂಡು ಓಡಾಡುತ್ತಾನೆ. "ಅಭಿವೃದ್ಧಿ"ಯ ಈ ರೀತಿಯ ಪರಿಕಲ್ಪನೆಯು ನಾಗರಿಕರ ಸುತ್ತ ಖಾಸಗಿ ಕವಚಗಳನ್ನು ಸೃಷ್ಟಿಸಿ, ನಗರದ ಊಹಿತ ಕೊಳಕು ಹಾಗೂ ಅವ್ಯವಸ್ಥೆಯಿಂದ ಅವರನ್ನು ರಕ್ಷಿಸುತ್ತದೆ. ಈ ರೀತಿಯ ವ್ಯವಸ್ಥೆಯು, ಮಧ್ಯಮ ವರ್ಗದ ವಿಶೇಷ ಸವಲತ್ತುಗಳಿಗೆ ಅಪಾಯವನ್ನು ಒಡ್ಡುವ ಕಡೆಗಾಣಿತ ಸಮುದಾಯಗಳನ್ನು ಹೊರಗಿಡುವ ಮೂಲಕ ಮಾತ್ರ ಮಾಡಲು ಸಾಧ್ಯ.

ಸಾರ್ವಜನಿಕ ವಸ್ತುಗಳು ಸಾರ್ವಜನಿಕವಾಗಿಯೇ ಉಳಿಯಬೇಕು. ಪ್ರತ್ಯೇಕತೆಯ ತತ್ವದ ಆಧಾರದ ಮೇಲೆ ಈ ಖಾಸಗಿ ಪ್ರಪಂಚ ನಿಂತಿದ್ದರೆ, ಆಗ ಇದರ ಪ್ರಕಾರ, ಸಾರ್ವಜನಿಕ ವಲಯವು ಸೇರ್ಪಡಿಕೆಯ ನೀತಿಯನ್ನು ಅನುಸರಿಸಬೇಕು. ಶುಲ್ಕವನ್ನು ನೀಡಲಾಗದವರನ್ನು ಹೊರಗಿಡುವ ಆಧಾರದ ಮೇಲೆ, ಈ ಗುರುತಿನ ಚೀಟಿಗಳು ಖಾಸಗಿ ಉದ್ಯಾನಗಳನ್ನು ಸೃಷ್ಟಿಸುತ್ತದೆ. ರೂ.50/–ನ್ನು ನೀಡಿ ಗುರುತಿನ ಚೀಟಿಯನ್ನು ಪಡೆಯುವ ಮೂಲಕ, ಖಾಸಗಿ ಕ್ಲಬ್ ಒಂದರ ಸದಸ್ಯತ್ವವನ್ನು ಪಡೆದಂತೆ ಆಗುತ್ತದೆ. ಹಾಗೆಂದ ಮಾತ್ರಕ್ಕೆ ಉದ್ಯಾನಗಳನ್ನು ದುರ್ಬಳಕೆ ಹಾಗೂ ನಾಶದಿಂದ ರಕ್ಷಿಸಬಾರದು ಎಂದಲ್ಲ. ಆದರೆ, ಈ ರೀತಿಯ ಪ್ರತ್ಯೇಕತಾವಾದವು ವರ್ಗಗಳ ನಡುವೆ ವಿಭಜನೆಯನ್ನು ಹೇರುತ್ತದೆ, ಹಾಗೆಯೇ ಇದು ಸಮಾಜದ ಇತರ ವಿಭಜನೆಗಳಾದ ಜಾತಿ, ಉದ್ಯೋಗ, ವೇಷಭೂಷಣ, ಧರ್ಮ, ಇತ್ಯಾದಿಗಳ ಆಧಾರದ ಮೇಲೂ ಆವರಿಸುತ್ತದೆ. ಕೆಲವೇ ಜನರ ದುರ್ಬಳಕೆಯ ಪರಿಕಲ್ಪನೆಯ ಆಧಾರದ ಮೇಲೆ ಸಾರ್ವಜನಿಕ ಸ್ಥಳಗಳಿಗೆ ಪ್ರವೇಶವನ್ನು ನಿರ್ಬಂಧ ವಿಧಿಸಿದರೆ, ಅನೇಕ ಸಾರ್ವಜನಿಕ ಸೇವೆಗಳು/ ವಸ್ತುಗಳ ಲಭ್ಯತೆ/ಬಳಕೆಯ ಮೇಲೂ ಇದು ವ್ಯತಿರಿಕ್ತ ಪರಿಣಾಮವನ್ನು ಬೀರುವ ಎಲ್ಲ ಸಾಧ್ಯತೆಯೂ ಇದೆ. ಸಮುದ್ರ ತೀರಗಳು, ರಸ್ತೆಗಳು, ಫುಟ್‌ಪಾತ್‌ಗಳು, ಕೆರೆಗಳು ಹಾಗೂ ಸಾರ್ವಜನಿಕ ಭೂಮಾಳಗಳ ಭವಿಷ್ಯವೂ ಇದೇ "ವಿಚಾರವಂತಿಕೆ"ಯಿಂದ ಅಪಾಯಕ್ಕೆ ಒಳಗಾಗುತ್ತವೆ.

ಈ ಕೆಳಕಂಡ ನಾವು, ಜನರ ಮೂಲಭೂತ ಹಕ್ಕಾದ ಸಾರ್ವಜನಿಕ ಸ್ಥಳಗಳ ಬಳಕೆಯ ಹಕ್ಕಿನ ಉಲ್ಲಂಘನೆಯನ್ನು ಮಾಡುವ ಈ ಬುದ್ಧಿಗರ್ವಿ ಹಾಗೂ ಕಾನೂನು ಬಾಹಿರ ಕಾರ್ಯನೀತಿಯನ್ನು ಹಿಂಪಡೆಯಬೇಕೆಂದು ಆಗ್ರಹ ಪಡಿಸುತ್ತೇವೆ. ಇದು ಅವರ ಜೀವನದ ಹಕ್ಕಿನ ಮೂಲಭೂತ ಅಂಶ. ನಗರದ ಹಸಿರು ತಾಣಗಳನ್ನು ಆನಂದಿಸಲು ಇಚ್ಛಿಸುವ ಯಾವ ಪ್ರಜೆಯಾದರೂ, ಅದನ್ನು ಉಚಿತವಾಗಿ ಅನುಭವಿಸುವಂತೆ ಉದ್ಯಾನಗಳನ್ನು ಎಲ್ಲರಿಗೂ ತೆರೆದಿಡಬೇಕು, ಕೇವಲ ಸದಸ್ಯತ್ವನ್ನು ಕೊಳ್ಳಲು ಶಕ್ತರಾದವರಿಗೆ ಮಾತ್ರ ಇದನ್ನು ಸೀಮಿತಗೊಳಿಸಬಾರದು.

**ಎನ್‌ವೈರನ್‌ಮೆಂಟ್ ಸಪೋರ್ಟ್ ಗ್ರೂಪ್, ಸಿಯೆಡ್ಸ್, ವಿಮೋಚನ, ದಲಿತ ಸಂಘರ್ಷ ಸಮಿತಿ, ಸಂಯೋಜಕ (ಬೆಂಗಳೂರು ಜಿಲ್ಲೆ), ಸನ್ಮತಿ, ಆಲ್ಟರ್‌ನೇಟಿವ್ ಲಾ ಫೋರಂ, ಸಂಗಮ, ಸ್ತ್ರೀ ಜಾಗೃತಿ ಸಮಿತಿ, ಸಿವಿಕ್ ಬೆಂಗಳೂರು ಹಸಿರು ಉಸಿರು, ಸ್ಲಂ ಜಗತ್ತು ಹಾಗೂ ಓಪನ್ ಸ್ಪೇಸ್.**